ಶ್ರೀ ಜೆ.ಸಿ.ಮಾಧುಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, ತಿಪಟೂರು ಕೊಬ್ಬರಿ ಮಾರಾಟದ ಪ್ರಮುಖ ಕೇಂದ್ರವಾಗಿದ್ದು...

(ಗೊಂದಲ)

ಅಧ್ಯಕ್ಷರು: ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಒಂದು ಹತ್ತು ನಿಮಿಷ ಈ ಪೀಠವನ್ನಲಂಕರಿಸಿ.

ಶ್ರೀ ವಾಟಾಳ್ ನಾಗರಾಜ್: ನೀವು ಕುಳಿತುಕೊಳ್ಳಿ, ಹೋಗಬಾರದು.

ಅಧ್ಯಕ್ಷರು: ಆ ಕಾರಣಕ್ಕಾಗಿ ಅಲ್ಲ. 10 ನಿಮಿಷ ದಯಮಾಡಿ ಸಹಕರಿಸಿ.

ಶ್ರೀ ವಾಟಾಳ್ ನಾಗರಾಜ್: ದಯಮಾಡಿ ಕ್ಷಮಿಸಿ. ಒಳ್ಳೆಯ ಸಂಪ್ರದಾಯವಲ್ಲ ಅದು. ದಯಮಾಡಿ ಕುಳಿತುಕೊಳ್ಳಿ, ಹಿಂದೆ ಹೇಳಿದ್ದಿರಿ, ನಾನು ಯಾವತ್ತೂ ಎದ್ದು ಹೋಗುವುದಿಲ್ಲವೆಂದು.

MR. SPEAKER: ಇಷ್ಟು ಪೆಂಡಿಂಗ್ ಇಟ್ಟುಕೊಂಡು... I cannot waste the time of the House.

ಶ್ರೀ ಬಿ.ಎಸ್.ಯಡಿಯೂರಪ್ಪ: ಸಾಕಷ್ಟು ಅವಕಾಶವನ್ನು ತಾವು ಕೊಟ್ಟಿದ್ದೀರಿ. ಅವರು ಇತಿಮಿತಿಗಳನ್ನು ಅರ್ಥಮಾಡಿಕೊಳ್ಳಬೇಕು. ನಾವು ಕೋ-ಆಪರೇಟ್ ಮಾಡದಿದ್ದರೆ ಆಗುವುದಿಲ್ಲ.

(ಉ) ತಿಪಟೂರಿನಲ್ಲಿ ಕೊಬ್ಬರಿ ವ್ಯಾಪಾರದಲ್ಲಿ ತೆರಿಗೆ ಕಳ್ಳತನವಾಗುತ್ತಿರುವುದು.

+ ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ): ತಿಪಟೂರು ಕೊಬ್ಬರಿ ಮಾರಾಟದ ಪ್ರಮುಖ ಕೇಂದ್ರವಾಗಿದ್ದು, ಕೊಬ್ಬರಿಗೆ ಒಳ್ಳೆಯ ಧಾರಣೆ ಕೂಡ ಇರುವ ಕಾಲದಲ್ಲಿ ತಿಪಟೂರಿನಲ್ಲಿ ಏನು ಕೊಬ್ಬರಿ ಮಾರಾಟವಾಗುತ್ತಿದೆ ಸರಿಸುಮಾರು 70 ರಷ್ಟು ಕೊಬ್ಬರಿ ತೆರಿಗೆ ವಂಚನೆಯಿಂದ ಆಚೆ ಹೋಗುತ್ತಿದೆ. ತಿಪಟೂರಿನಲ್ಲಿ ನಾವು ಸನ್ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಕೇಳಿ, ಒಂದು ಹಂತಕ್ಕೆ ಅವರು ನಮಗೆ ಸಹಾಯ ಮಾಡಿದ ಮೇಲೆ, ತೆರಿಗೆ ಚೆನ್ನಾಗಿ ವಸೂಲಾಗುತ್ತಿತ್ತು. ತಿಪಟೂರು ಎ.ಪಿ.ಎಂ.ಸಿ. ವ್ಯಾಪ್ತಿಗೆ ಕೊಬ್ಬರಿ ಬರದೆ, ಅನೇಕ ಕಡೆ ತಿಪಟೂರು ಆಚೆ ಭಾಗ ಅರಸೀಕೆರೆ, ಚಿಕ್ಕನಾಯ್ಕನಹಳ್ಳಿ, ತುರುವೇಕೆರೆ, ಚನ್ನರಾಯಪಟ್ಟಣ ತಾಲ್ಲೂಕುಗಳಿಗೆ ಕೊಬ್ಬರಿಯನ್ನು ರವಾನಿಸುತ್ತಿದ್ದಾರೆ. ಹಾಗಾಗಿ, ಏನಾಗಿದೆಯೆಂದರೆ, ತಿಪಟೂರಿನಲ್ಲಿ ನಿಜವಾಗಿ ಟ್ಯಾಕ್ಸ್ ಕಟ್ಟಿ ವ್ಯಾಪಾರ ಮಾಡುತ್ತಿರುವ ವರ್ತಕರು ಒಂದು ಕಡೆ ಕ್ಷೀಣಿಸುತ್ತಿದ್ದಾರೆ. ಒಂದು ಕ್ವಿಂಟಾಲ್ ಕೊಬ್ಬರಿಗೆ 200-210 ರೂಪಾಯಿಗಳಿಗೆ ಏನು ಟ್ಯಾಕ್ಸ್ ಬರುತ್ತಿತ್ತು, ಅದನ್ನು ತಪ್ಪಿಸಿ ಮಾರುವವರಿಗೆ ಇವರು ಸ್ಪರ್ಧೆ ಮಾಡಲಾರದ ಸ್ಥಿತಿ ಬಂದಿದೆ. ನಮಗೆ ಎ.ಪಿ.ಎಂ.ಸಿ.ಗೆ ಬರಬೇಕಾದ

ಹಣ ಕೂಡ ಜಮಾ ಆಗುತ್ತಿಲ್ಲ. 70, 80 ಲಕ್ಷ ವಸೂಲಾಗುತ್ತಿದ್ದ ಹಣ ಇವತ್ತು 20, 30 ಲಕ್ಷ ಕಡಿಮೆಯಾಗುವ ಸ್ಥಿತಿಗೆ ಬಂದಿದೆ. ಇದೇನಾದರೂ ಸರಿಯಾದರೆ ರೈತರಿಗೆ ಇನ್ನೂ 100-200 ರೂಪಾಯಿಗಳವರೆಗೆ ಜಾಸ್ತಿಯಾಗುವುದರಲ್ಲಿ ಅನುಮಾನವಿಲ್ಲ. ನಾನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಕೇಳುವುದೇನೆಂದರೆ, ಬೇಕಾದರೆ ನಾನು ಬಂದು ತಮಗೆ ಬರೆದುಕೊಡುತ್ತೇನೆ, ಅಂಥ ಕಡೆ ಸ್ವಲ್ಪ ಸ್ಕ್ವಾಡ್ ಹಾಕಿ ಏನಾದರೂ ನಂ (2)ನಲ್ಲಿ ಹೋಗುವ ಕೊಬ್ಬರಿಯನ್ನು ಸ್ವಲ್ಪ ತಹಬಂದಿಗೆ ತಂದು ನಿಜವಾಗಿ ಟ್ಯಾಕ್ಸ್ ಕಟ್ಟಿ ವ್ಯಾಪಾರ ಮಾಡುವ ವರ್ತಕರು ಮತ್ತು ರೈತರಿಬ್ಬರ ರಕ್ಷಣೆಯನ್ನು ಮಾಡಬೇಕೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

+ ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಸದಸ್ಯರು ನಂ(2)ರಲ್ಲಿ ಹೋಗುತ್ತಿರುವ ಕೊಬ್ಬರಿ ತೆರಿಗೆ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಅವರು ಹೇಳಿದಂತೆ ಈಗಾಗಲೇ ಸ್ಕ್ವಾಡ್ ಹಾಕಲಿಕ್ಕೆ ನಾನು ಸೂಚಿಸಿದ್ದೇನೆ. ಅದನ್ನು ಬಿಗಿ ಮಾಡಲಿಕ್ಕೆ ಎಷ್ಟು ಸಾಧ್ಯವೋ ಅಷ್ಟು ಮಾಡುತ್ತೇನೆ. ಇದು ಬಹಳ ದಿನಗಳಿಂದ ನಡೆಯುತ್ತಿದೆ. ಬಹಳಷ್ಟು ಕೊಬ್ಬರಿ ವ್ಯಾಪಾರದಲ್ಲಿ ತೆರಿಗೆ ಕಳ್ಳತನವಾಗುತ್ತಿರತಕ್ಕದ್ದನ್ನು ನಾವು ಅನೇಕ ಸಾರಿ ಚರ್ಚೆ ಮಾಡಿದ್ದೇವೆ. ಎಷ್ಟು ಸಾದ್ಯವೋ ಅಷ್ಟು ಬಿಗಿ ಮಾಡುತ್ತೇನೆ.

(ಊ) ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹೈಸ್ಕೂಲಿನಲ್ಲಿ ಶಿಕ್ಷಕರಿಗೆ ಅನ್ಯಾಯ.

ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ): ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹೈಸ್ಕೂಲ್‌ನಲ್ಲಿ, ಶಿಕ್ಷಕರಿಗೆ ಅನ್ಯಾಯವಾಗಿದ್ದರ ಬಗ್ಗೆ ರಾಜ್ಯ ಸರ್ಕಾರಕ್ಕೆ ತಪ್ಪು ಕಲ್ಪನೆ ಕೊಟ್ಟಿದ್ದ ಕಮಿಷನರ್‌ರವರ ಬಾಬ್ತು ವಿವರಣೆ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಅವರು ಹೇಳುವಂಥ ವಿಚಾರ ಮೇಲ್ಮನೆಯಲ್ಲಿ ಕೂಡ ಚರ್ಚೆಗೆ ಬಂದಿತ್ತು.

ಅಧ್ಯಕ್ಷರು: ನಾಳೆ ಸದನ ಮುಗಿಯುದರೊಳಗೆ, ಇವತ್ತು ಸಂಜೆ ಅಥವಾ ನಾಳಯೊಳಗೆ ಮಾಹಿತಿ ತರಿಸಿಕೊಡಿ.

(ಎ) ರಾಜ್ಯದಲ್ಲಿ ಒಂದಂಕಿ ಲಾಟರಿ ಹಾಗೂ ಮಟ್ಕಾ ಹಾವಳಿ.

+ ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ): ಸನ್ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಒಂದಂಕಿ ಲಾಟರಿ ಮತ್ತು ಮಟ್ಕಾ ನಡೆಯತಕ್ಕದ್ದು ತಮಗೆಲ್ಲಾ ಗೊತ್ತಿದೆ. ಯಾವ ಕ್ಷೇತ್ರವೂ ಅದಕ್ಕೆ ಹೊರತಾಗಿಲ್ಲ. ಆದರೆ, ಅದನ್ನು ನಿಲ್ಲಿಸುವಂಥ ಪ್ರಾಮಾಣಿಕ ಪ್ರಯತ್ನ ಸಹ ನಮ್ಮ ಪೊಲೀಸ್ ಇಲಾಖೆಯಿಂದ ಆಗುತ್ತಿಲ್ಲ. ಅದಕ್ಕೆ ತಾವು ಬೇರೆ ಬೇರೆ ಸಂದರ್ಭಗಳಲ್ಲಿ, ಕಾನೂನಿನ ನೆರವನ್ನು ಅಥವಾ ತಾಂತ್ರಿಕ ಕಾರಣಗಳನ್ನೋ ಕೊಡುತ್ತಿದ್ದೀರಿ. ಈ ಮಟ್ಕಾ ಏಕೆ ನಡೆಯುತ್ತಿದೆ? ಇದನ್ನು ನಿಲ್ಲಿಸಲಕ್ಕೆ ಏಕೆ ಆಗುತ್ತಿಲ್ಲ?